01-K

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003**

**KARNATAKA SCHOOL EXAMINATION AND ASSESSMENT BOARD**

**6th Cross, Malleshwaram, Bengaluru – 560 003**

## 2025–26 ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ – 4

## S.S.L.C. MODEL QUESTION PAPER - 4 : 2025 - 26

## ವಿಷಯ : ಪ್ರಥಮ ಭಾಷೆ – ಕನ್ನಡ

## Subject : First Language — KANNADA

**ವಿಷಯ ಸಂಕೇತ : 01-K** | **Subject Code : 01-K**

ಸಮಯ : 3 ಗಂಟೆ 15 ನಿಮಿಷಗಳು ] | [ Time : 3 Hours 15 Minutes

ಗರಿಷ್ಠ ಅಂಕಗಳು : 100 ] | [ Max. Marks : 100

---

**ಪರೀಕ್ಷಾರ್ಥಿಗಳಿಗಾಗಿ ಸಾಮಾನ್ಯ ಸೂಚನೆಗಳು :**

1. ಈ ಪ್ರಶ್ನೆಪತ್ರಿಕೆಯು ಒಟ್ಟು 45 ಪ್ರಶ್ನೆಗಳನ್ನು ಹೊಂದಿದೆ.
2. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
3. ಬಲಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವೂ ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

[ Turn over

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : 6 X 1 = 6**

1. ಕನ್ನಡ ವರ್ಣಮಾಲೆಯಲ್ಲಿರುವ ಯೋಗವಾಹಗಳ ಸಂಖ್ಯೆ

   (ಎ) ೬

   (ಬಿ) ೫

   (ಸಿ) ೯

   (ಡಿ) ೨

2. 'ಉನ್ಮಾದ' ಪದವು ಈ ಸಂಧಿಗೆ ಉದಾಹರಣೆಯಾಗಿದೆ.

   (ಎ) ಸವರ್ಣದೀರ್ಘ

   (ಬಿ) ಗುಣ

   (ಸಿ) ಅನುನಾಸಿಕ

   (ಡಿ) ಜಶ್ತ್ವ

3. ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಬಳಸಲಾಗುವ ಲೇಖನಚಿಹ್ನೆ

   (ಎ) ಆವರಣ

   (ಬಿ) ವಿವರಣಾತ್ಮಕ

   (ಸಿ) ಭಾವಸೂಚಕ

   (ಡಿ) ಅಲ್ಪವಿರಾಮ

4. ವರ್ತಮಾನಕಾಲ ಸೂಚಕ ಪ್ರತ್ಯಯವಿದು

   (ಎ) ಉತ್ತ

   (ಬಿ) ಉವ

   (ಸಿ) ವ

   (ಡಿ) ದ

5. ಷಷ್ಠೀ ವಿಭಕ್ತಿಯ ಕಾರಕಾರ್ಥವಿದು

   (ಎ) ಕರಣಾರ್ಥ

   (ಬಿ) ಸಂಬಂಧ

   (ಸಿ) ಅಧಿಕರಣ

   (ಡಿ) ಕರ್ಮಾರ್ಥ

6. 'ಮುರಾರಿ' ಪದವು ಈ ಸಮಾಸಕ್ಕೆ ಸೇರಿದೆ

   (ಎ) ದ್ವಿಗು

   (ಬಿ) ಬಹುವ್ರೀಹಿ

   (ಸಿ) ದ್ವಂದ್ವ

   (ಡಿ) ತತ್ಪುರುಷ

**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ :** **4 X 1 = 4**

7. ದ್ಯೂತ : ಜೂಜು : : ಚೀರ : ..................... .
8. ಲಕ್ಷ್ಮಣ : ಅಂಕಿತನಾಮ : : ಪರ್ವತ : ..................... .
9. ರೊಯ್ಯನೆ : ಅನುಕರಣಾವ್ಯಯ : : ತರುವಾಯ : ..................... .
10. ಕನ್ನಡಿಗ : ತದ್ಧಿತಾಂತ ನಾಮ : : ಶಾಲೆಯವರೆಗೆ : ..................... .

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **7 X 1 = 7**

11. ಪ್ರಾಣಿಗಳು ತಮ್ಮ ಮಕ್ಕಳಿಗೆ ಯಾವ ವಿಚಾರವಾಗಿ ತರಪೇತು ಕೊಡುತ್ತವೆ?
12. ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು?
13. 3ನೇ ಎಡ್ವರ್ಡನು ಸ್ಕಾಟಲೆಂಡಿನ್ನಿಂದ ತಂದ ಶಿಲೆಯ ಹೆಸರೇನು?
14. ಸೋಮಶರ್ಮ ಕಾಶ್ಯಪಿಯರ ಮಕ್ಕಳ ಹೆಸರೇನು?
15. ಹಲಗಲಿಯ ಬೇಡರು ಯಾರ ಕಪಾಳಕ್ಕೆ ಹೊಡೆದು ನೆಲಕ್ಕೆ ಉರುಳಿಸಿದರು?
16. ದ್ರೋಣನು ಪರುಶುರಾಮರಲ್ಲಿಗೆ ಏಕೆ ಬಂದನು?
17. ಒಡೆಯನ ಅಂಗಳದಲ್ಲಿ ಮಾವಿನ ಮರಗಳು ಹೇಗೆ ಬೆಳೆದು ನಿಂತಿವೆ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** **10 X 2 = 20**

18. ಆಂಗ್ಲ ಭಾಷೆ ವಿಶ್ವವ್ಯಾಪಿಯಾಗಲು ಕಾರಣವೇನು?
19. ನಾಲ್ವಡಿ ಕೃಷ್ಣರಾಜ ಒಡೆಯರು ಸ್ಥಾಪಿಸಿದ ನ್ಯಾಯವಿಧಾಯಕ ಸಭೆಯನ್ನು ಕುರಿತು ತಿಳಿಸಿ.
20. ಲಂಡನ್ ನಗರದಲ್ಲಿನ ಇಂಡಿಯಾ ಆಫೀಸನ್ನು ಕುರಿತು ಬರೆಯಿರಿ.
21. ಸೂರ್ಯಮಿತ್ರನು ಅಗ್ನಿಭೂತಿ ವಾಯುಭೂತಿಯರಿಗೆ ವಿದ್ಯಾಭ್ಯಾಸದ ನಂತರ ಮಾವನೆಂದು ಹೇಳಲು ಕಾರಣವೇನು?
22. ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ?
23. ಹಲಗಲಿಗೆ ದಂಡು ಬರಲು ಕಾರಣವೇನು?
24. ಬಾಲಕ ಭಗತ್‌ಸಿಂಗ್ ಜಲಿಯನ್ ವಾಲಾಬಾಗ್‌ನಿಂದ ಮಣ್ಣನ್ನು ತಂದ ಸಂದರ್ಭವನ್ನು ವಿವರಿಸಿ.
25. 'ಅನ್‌ಟು ದಿಸ್ ಲಾಸ್ಟ್' ಕೃತಿ ಗಾಂಧೀಜಿಯವರ ಮೇಲೆ ಯಾವ ಪರಿಣಾಮ ಬೀರಿತು?
26. ಭಗವಂತನಲ್ಲಿ ಶರಣಾಗುವ ಭಾವ ಅಕ್ಕಮಹಾದೇವಿಯ ವಚನದಲ್ಲಿ ಹೇಗೆ ವ್ಯಕ್ತಗೊಂಡಿದೆ?
27. ಗುರೂಪದೇಶದ ಗುಣಗಳನ್ನು ಪಟ್ಟಿ ಮಾಡಿ.

**V. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು/ ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** **2 X 3 = 6**

28. ಡಿ. ಎಸ್. ಜಯಪ್ಪಗೌಡ
29. ದ. ರಾ. ಬೇಂದ್ರೆ

[ Turn over

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ : 1 X 3 = 3**

30. ಎನ್ನಣುಗಾಳನೆನ್ನಣುಗದಮ್ಮನಿಕ್ಕಿದ ಪಾರ್ಥಭೀಮರುಂ

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : 1 X 3 = 3**

31. "ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು. ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?"

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ : 1 X 3 = 3**

32. ಆಳಾಗಬಲ್ಲವನು ಅರಸಾಗಬಲ್ಲನು.

ಅಥವಾ

ಗಿಡವಾಗಿ ಬಗ್ಗದ್ದು, ಮರವಾಗಿ ಬಗ್ಗೀತೆ.

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : 6 X 3 = 18**

33. "ದೇವರೆ, ಮರಹತ್ತುವಷ್ಟು ಅವಕಾಶ ಕರುಣಿಸು."
34. "ಈ ಸಮಷ್ಟಿ ಮನಸ್ಸಲ್ಲಿ ಎಲ್ಲರೂ ಇರುತ್ತಾರೆ."
35. "ನಾನಾಕೆಯನ್ನು ಪರೀಕ್ಷಿಸುವೆ, ನೀವು ಬಿಸಿ ನೀರು ಸಿದ್ಧಪಡಿಸಿ"
36. "ಸಮರದೊಳೆನಗಜ್ಜ ಪೇಟೆಮಾವುದು ಕಜ್ಜಂ"
37. "ಹಸುರು ಸಂಜೆಯೀ ಬಿಸಿಲೂ!"
38. "ನೊಳವಿಂಗೆ ಕುಪ್ಪೆ ವರಂ"

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : 1 X 4 = 4**

39. ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ

..........................................................................

..........................................................................

..........................................................................

..........................................................................

ಗುರ್ವತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದೆದ್ದನು

**ಅಥವಾ**

ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ

..........................................................................

..........................................................................

..........................................................................

..........................................................................

ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು.

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ : 1 X 4 = 4**

40. ಕೊರಳ ಸೆರೆ ಹಿಗ್ಗಿದವು ದೃಗುಜಲ
ಉರವಣಿಸಿ ಕಡು ನೊಂದನಕಟಾ
ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ
ಹರಿಯ ಹಗೆ ಹೊಗೆದೋರದುರುಹದೆ
ಬರಿದೆ ಹೋಹುದೆ ತನ್ನ ವಂಶವ
ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 X 4 = 8**

41. ಶಬರಿ ಮತ್ತು ಶ್ರೀರಾಮನ ನಡುವಿನ ಸಂಭಾಷಣೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**ಅಥವಾ**

'ನಂಬಿ ಕೆಟ್ಟವರಿಲ್ಲ' ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ.

42. ಸಂಕಲ್ಪ ಮತ್ತು ಅನುಷ್ಠಾನ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿ.

**ಅಥವಾ**

ಜೀವನದಲ್ಲಿರಬೇಕಾದ ಧನಾತ್ಮಕ ಭಾವನೆ ಹಾಗೂ ದೃಢಸಂಕಲ್ಪದ ಮಹತ್ತ್ವವನ್ನು ಜಿ. ಎಸ್. ಶಿವರುದ್ರಪ್ಪನವರು ಸಂಕಲ್ಪಗೀತೆ ಕವನದಲ್ಲಿ ಹೇಗೆ ವ್ಯಕ್ತಪಡಿಸಿದ್ದಾರೆ?

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : 1 X 4 = 4 (2+2)**

43. ಭಗವಾನ್ ರಮಣ ಮಹರ್ಷಿಗಳು ಭಾರತ ದೇಶದ ಆಧ್ಯಾತ್ಮಿಕತೆಯ ಶಿಖರ. ಅತ್ಯಂತ ಸರಳವಾಗಿ, ಎಲ್ಲರಿಗೂ ತಿಳಿಯುವಂತೆ ವೇದಾಂತವನ್ನು ತಿಳಿಸುವುದು ಅವರಿಗೆ ಸುಲಭ ಸಾಧ್ಯವಾಗಿತ್ತು. ಕೆಲವೊಮ್ಮೆ ವಿಶದವಾಗಿ, ಕೆಲವೊಮ್ಮೆ ಸೂಕ್ತಿಗಳಿಂದ, ಕೆಲವೊಮ್ಮೆ ನಿದರ್ಶನಗಳಿಂದ ಮತ್ತೆ ಕೆಲವು ಬಾರಿ ಮೌನದಿಂದ ಭಕ್ತರ ಸಮಸ್ಯೆಗಳಿಗೆ ಸಮರ್ಪಕ ಉತ್ತರ ನೀಡುತ್ತಿದ್ದರು. ಒಮ್ಮೆ ಅವರು ದೇವಸ್ಥಾನದ ಮುಂದಿನ ತೋಟದಲ್ಲಿ ಕುಳಿತಾಗ ಒಂದು ಪರಿವಾರ ಅವರ ಬಳಿಗೆ ಬಂತು. ತಂದೆ, ತಾಯಿ ಮತ್ತು ಏಳೆಂಟು ವರ್ಷದ ಮಗ ಬಂದು ರಮಣ ಮಹರ್ಷಿಗೆ ಪ್ರಣಾಮ ಮಾಡಿ ಮುಂದೆ ಕುಳಿತರು. ತಾಯಿ "ಸ್ವಾಮಿ, ನನ್ನ ಮಗನಿಗೆ ಮನಸ್ಸು ಏಕಾಗ್ರ ಮಾಡುವುದು, ಧ್ಯಾನ ಮಾಡುವುದು ತುಂಬ ಕಷ್ಟ. ದಯವಿಟ್ಟು ಮಾರ್ಗದರ್ಶನ ಮಾಡಿ" ಎಂದಳು. ಮಹರ್ಷಿಗಳು ಒಂದು ಚೂರು ದೋಸೆಯನ್ನು ತೆಗೆದುಕೊಂಡು ಉಳಿದವುಗಳನ್ನು ಸುತ್ತಮುತ್ತ ಇರುವವರಿಗೆಲ್ಲ ಹಂಚಿಸಿದರು. ಇನ್ನು ಆರೆಂಟು ದೋಸೆಗಳು ತಟ್ಟೆಯಲ್ಲಿ ಉಳಿದಿದ್ದವು. ಆಗ ರಮಣರು ಆ ಹುಡುಗನ ಕಡೆಗೆ ತಿರುಗಿಕೊಂಡು, "ಮಗು, ನೀನೀಗ ದೋಸೆ ತಿನ್ನುತ್ತಾ ಹೋಗಬೇಕು. ಆದರೆ ಒಂದು ಷರತ್ತು. ನೀನು ನನ್ನ ಬೆರಳನ್ನು ನೋಡುತ್ತಲೇ ಇರಬೇಕು. ನನ್ನ ಎತ್ತಿದ ಬೆರಳು ಮೇಲೆ ಇರುವವರೆಗೂ ತಿನ್ನುತ್ತಲೇ ಇರಬೇಕು. ಬೆರಳನ್ನು ಕೆಳಗೆ ಇಳಿಸಿದ ತಕ್ಷಣ ತಿನ್ನುವುದನ್ನು ನಿಲ್ಲಿಸಬೇಕು. ಆಗ ನಿನ್ನ ತಟ್ಟೆಯಲ್ಲಿ ಒಂದು ಚೂರು ದೋಸೆ ಇರಬಾರದು" ಎಂದವರೇ "ಹೂಂ ಶುರು ಮಾಡು" ಎಂದು ಬೆರಳೆತ್ತಿದರು. ಹುಡುಗ ಕಣ್ಣು

[ Turn over

ಮಿಟುಕಿಸದೇ ಬೆರಳನ್ನು ನೋಡುತ್ತ ದೋಸೆ ತಿನ್ನಲಾರಂಭಿಸಿದ. ಮೊದಮೊದಲು ದೊಡ್ಡ ದೊಡ್ಡ ತುಂಡುಗಳನ್ನು ತುಂಬಿಕೊಂಡ. ನಂತರ ಸಣ್ಣ ಸಣ್ಣ ತುಣುಕುಗಳನ್ನು ತಿಂದ. ಅವರ ಬೆರಳು ಅಲುಗಾಡಿದಂತೆಲ್ಲ ಅವನ ತಿನ್ನುವ ವೇಗ ಹೆಚ್ಚು ಕಡಿಮೆಯಾಗುತ್ತಿತ್ತು. ಒಂದು ಕ್ಷಣಕ್ಕೆ ರಮಣರ ಬೆರಳು ಕೆಳಗಿಳಿಯಿತು. ತಕ್ಷಣ ಉಳಿದ ದೊಡ್ಡ ಚೂರನ್ನು ಬಾಯಲ್ಲಿ ತುಂಬಿಕೊಂಡು ಖಾಲಿ ಮಾಡಿದ. ಆಗ ರಮಣರು ಅವನ ಬೆನ್ನು ತಟ್ಟಿ ಹೇಳಿದರು, " ಮಗು, ಈಗ ನೀನು ಮಾಡಿದ್ದೇ ಧ್ಯಾನ. ತಿನ್ನುವುದನ್ನು ನೀನು ನಿಲ್ಲಿಸಿರಲಿಲ್ಲ ಆದರೆ ನನ್ನ ಬೆರಳಿನ ಮೇಲಿನ ಕಣ್ಣನ್ನು ತೆಗೆದಿರಲಿಲ್ಲ. ಇದೇ ಧ್ಯಾನಮಯ ಜೀವನ. ನಮ್ಮ ಕರ್ತವ್ಯವನ್ನು ಮಾಡುತ್ತಲೇ ಇರಬೇಕು. ಆದರೆ ಭಗವಂತನ ಮೇಲಿನ ಚಿಂತನೆಯನ್ನು ಕ್ಷಣವೂ ಬಿಡಬಾರದು" ಎಂದು ಹೇಳಿದರು.

**ಪ್ರಶ್ನೆಗಳು :**

ಅ) ಧ್ಯಾನಮಯ ಜೀವನದ ಬಗ್ಗೆ ರಮಣ ಮಹರ್ಷಿಗಳು ಹುಡುಗನಿಗೆ ಹೇಗೆ ಮಾರ್ಗದರ್ಶನ ನೀಡಿದರು?

ಆ) ರಮಣ ಮಹರ್ಷಿಗಳು ಭಕ್ತರ ಸಮಸ್ಯೆಗಳನ್ನು ಪರಿಹರಿಸುತ್ತಿದ್ದ ಬಗೆಯನ್ನು ತಿಳಿಸಿ.

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : 1 X 5 = 5**

44. ನಿಮ್ಮನ್ನು ಧಾರವಾಡದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ವಿಶ್ವಾಸ್' ಎಂದು ಭಾವಿಸಿಕೊಂಡು, ಬೆಂಗಳೂರಿನ ನೆಹರೂ ತಾರಾಲಯ ವೀಕ್ಷಣೆಗೆ ಸಮಯಾವಕಾಶ ನಿಗದಿಪಡಿಸಿ ತಿಳಿಸುವಂತೆ ಕೋರಿ, ಅಲ್ಲಿನ ವ್ಯವಸ್ಥಾಪಕರಿಗೆ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಹಾವೇರಿಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಚಿರಂತನ್' ಎಂದು ಭಾವಿಸಿಕೊಂಡು, ಶಾಲೆಯಲ್ಲಿ ಆಚರಿಸಿದ ವನಮಹೋತ್ಸವ ಕಾರ್ಯಕ್ರಮವನ್ನು ವಿವರಿಸಿ ದಾವಣಗೆರೆಯ ಬಸವೇಶ್ವರ ಬಡಾವಣೆಯಲ್ಲಿ ವಾಸವಾಗಿರುವ 'ಜಯಂತ್' ಎಂಬ ಹೆಸರಿನ ಗೆಳೆಯನಿಗೆ ಪತ್ರವನ್ನು ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : 1 X 5 = 5**

45. ಸಾಮಾಜಿಕ ಪಿಡುಗುಗಳು.

**ಅಥವಾ**

ಹೆಣ್ಣು ಮಕ್ಕಳಿಗೆ ಸರ್ಕಾರದ ಸೌಲಭ್ಯಗಳು.